# ಯೋಹಾನನು ಬರೆದ ಎರಡನೆಯ ಪತ್ರಿಕೆ

**ಲೇಖಕ:**

ಕರ್ತನಾದ ಯೇಸುಕ್ರಿಸ್ತನ ಮೂಲ ಅಪೋಸ್ತಲನಾದ ಯೋಹಾನನು

**ದಿನಾಂಕ:**

ಬಹುಶಃ ಕ್ರಿ.ಶ. 85 ಮತ್ತು ಕ್ರಿ. ಶ. 95.

**ವಿಷಯ:**

ಕೆಲವು ಪಂಡಿತರು ಯೋಹಾನನು ಸಾಂಕೇತಿಕವಾಗಿ “ದೇವರಾದುಕೊಂಡ ಅಮ್ಮನವರಿಗೆ” ಎಂದು ಹೇಳುವ ಸಭೆಗೆ ಇದನ್ನು ಬರೆದರಬಹುದೆಂದು ಯೋಚಿಸುತ್ತಾರೆ. ಇನ್ನು ಕೆಲವರು ಅವನು ಒಬ್ಬ ಕ್ರೈಸ್ತ ಹೆಂಗಸಿಗೆ ಮತ್ತು ಆಕೆಯ ಮಕ್ಕಳಿಗೆ (ಇದು ಹೆಚ್ಚು ಸಾಧ್ಯತೆ ಇರುವಂತೆ ತೋರುತ್ತದೆ) ಬರೆಯುತ್ತಿದ್ದಾನೆಂದು ಯೋಚಿಸುತ್ತಾರೆ. ಈ ಎರಡೂ ಸಂದರ್ಭದಲ್ಲಿ ಅವನು ಬರೆಯುತ್ತಿರುವುದು ನಮಗೆ ಅದೇ ಮೌಲ್ಯವನ್ನು ಹೊಂದಿದೆ. ಎರಡು ಮುಖ್ಯ ಪದಗಳು “ಸತ್ಯ” ಮತ್ತು “ಪ್ರೀತಿ”. ಸುಳ್ಳು ಬೋಧಕರ ವಿಷಯವಾಗಿ ತೀವ್ರ ಎಚ್ಚರಿಕೆಯು ವಚನಗಳು 7-11 ರಲ್ಲಿದೆ, ಮತ್ತು ನಾವು ಅದರ ಬಗ್ಗೆ ಗಮನ ಹರಿಸುವುದು ಒಳ್ಳೆಯದು.

# 1

1

**1:1** “*ಹಿರಿಯನು*”– ಯೋಹಾನನು ತನ್ನನ್ನು ಅಪೋಸ್ತಲನೆಂದು ಕರೆದುಕೊಳ್ಳುವುದಿಲ್ಲ (ಅವನು ಅವರಲೊಬ್ಬನಾಗಿದ್ದರೂ ಸಹ). ಅಪೋಸ್ತಲರನ್ನು ಇತರರು ಹಿರಿಯರು ಎಂದು ಕರೆಯುತ್ತಿದ್ದರು ಮತ್ತು ಕೆಲವು ಸಾರಿ ತಮ್ಮನ್ನು ತಾವೇ ಹಿರಿಯರೆಂದು ಸೂಚಿಸಿಕೊಳ್ಳುತ್ತಿದ್ದರು (1 ಪೇತ್ರ 5:1). ಈ ಪದವು ಸಭೆಯಲ್ಲಿ ಪಕ್ವತೆಯ ವರ್ಷಗಳನ್ನು ಮತ್ತು ನಾಯಕತ್ವವನ್ನು ಸೂಚಿಸುತ್ತದೆ.

“*ಆದುಕೊಂಡವರು*”– ಈ ಗ್ರೀಕ್ ಪದವನ್ನು “ಆರಿಸಿಕೊಂಡವರು” ಎಂಬುದಾಗಿಯೂ ಅನುವಾದಿಸಬಹುದಾಗಿದೆ (ಮತ್ತಾಯ 24:22,24,31; ರೋಮಾ 8:33; ಎಫೆ 1:4; ಕೊಲೊ 3:12; 1 ಪೇತ್ರ 1:1; 2:9).

“*ಅಮ್ಮನವರು*”– ಇಲ್ಲಿ ಉಪಯೋಗಿಸಿರುವ ಗ್ರೀಕ್ ಪದ ಕೈರಿಯ ಇದು ಬಹಳ ಸಾಮಾನ್ಯವಾದ ವಯಕ್ತಿಕ ಹೆಸರಾಗಿತ್ತು. ಯೋಹಾನನು ತನಗೆ ಚಿರಪರಿಚಿತವಾದ ಒಬ್ಬ ಹೊಂಗಸಿಗೂ ಆಕೆಯ ಮಕ್ಕಳಿಗೂ ಬರೆಯುತ್ತಿದ್ದನು.

“*ನಮ್ಮಲ್ಲಿ ನೆಲೆಗೊಂಡಿರುವ ಪ್ರೀತಿ*”– ಅವನ ಪ್ರೀತಿಯು ಮಾನವ ಭಾವನೆಯ ಅಥವಾ

ಸ್ವಾಭಾವಿಕ ವಾತ್ಸಲ್ಯವಾಗಿರಲಿಲ್ಲ ಆದರೆ ದೈವಿಕ ಪ್ರೀತಿಯಾಗಿತ್ತು (ಅಗಾಪೆ – ಟಿಪ್ಪಣಿ 1 ಕೊರಿಂಥ 13:1). ಮತ್ತು ಈ ಪ್ರೀತಿಯು ಯಾವಾಗಲೂ ಸತ್ಯದ ಮೇಲೆ ಆಧಾರಿತವಾಗಿದೆ. "ಸತ್ಯ" ಇಲ್ಲಿಯು ಸಹ ಇದು ಕ್ರಿಸ್ತನ ಸಂದೇಶವಾಗಿದೆ (ಯೋಹಾನ 1:17). ದೇವರು ಪ್ರಕಟಿಸಿದ ಸತ್ಯದ ಮೇಲಿರುವ ಭಕ್ತಿಯ ಮೇಲಿಂದಾಗಿ ವಿಶ್ವಾಸಿಗಳು ಒಬ್ಬರನ್ನೊಬ್ಬರು ಪ್ರೀತಿಸುತ್ತಾರೆ. **2**

**1:2** *"ನಮ್ಮಲ್ಲಿ ನೆಲಗೊಂಡಿರುವ"*– ಕ್ರಿಸ್ತನಲ್ಲಿರುವ ಸತ್ಯವನ್ನು ತಮ್ಮ ಮನಸ್ಸಿನಲ್ಲಿ ಒಪ್ಪಿಕೊಳ್ಳುವುದಕ್ಕಿಂತಲೂ ಹೆಚ್ಚಾಗಿ ಮಾಡುತ್ತಾರೆ. ಅವರು ಸತ್ಯವನ್ನು ತಮ್ಮ ಹೃದಯಲ್ಲಿ ಆಹ್ವಾನಿಸುತ್ತಾರೆ, ಮತ್ತು ಅವರ ಎಲ್ಲಾ ನಡವಳಿಕೆಯ ಮೇಲೆ ಪ್ರಭಾವ ಬೀರಲು ಸತ್ಯವು ಉಳಿದಿದೆ. ಕೀರ್ತನೆ 51:6 ಹೋಲಿಸಿರಿ. ಮತ್ತು ಸತ್ಯವಾಗಿರುವ ಕ್ರಿಸ್ತನು (ಯೋಹಾನ 14:6) ಅವರೊಳಗಿದ್ದಾನೆ.

*"ಸದಾಕಾಲವೂ"*– ವಿಶ್ವಾಸಿಗಳ ಹೃದಯದಲ್ಲಿ ಬಿತ್ತಲ್ಪಟ್ಟ ಸತ್ಯವು ಶಾಶ್ವತವಾಗಿ ನಿತ್ಯಕ್ಕೂ ಇರುವದೆಂದು ಯೋಹಾನನಿಗೆ ಭರವಸೆ ಇತ್ತು. **3**

- **1:3** 1 ತಿಮೊ 1:2.

*"ತಂದೆಯ ಮಗನಾದ"*– ಯೋಹಾನನು ತಂದೆ ಮತ್ತು ಕ್ರಿಸ್ತನ ನಡುವೆ ಹೇಗೆ ವ್ಯತ್ಯಾಸವನ್ನು ತೋರಿಸುತ್ತಾನೆಂದು ಗಮನಿಸಿರಿ. ಕ್ರಿಸ್ತನು ತಂದೆಯಲ್ಲ. ತಂದೆಯು ಕ್ರಿಸ್ತನಲ್ಲ. ಅವರು ನಿತ್ಯತ್ವದಲ್ಲಿ ಇಬ್ಬರು ವ್ಯಕ್ತಿಗಳಾಗಿ ಒಂದೇ ತ್ರಯೈಕತ್ವದ ಅಸ್ತಿತ್ವದಲ್ಲಿದ್ದಾರೆ. ವ. 9 ಸಹ ನೋಡಿರಿ. ತಂದೆ, ಮಗ ಮತ್ತು ತ್ರಯೈಕತ್ವದ ಟಿಪ್ಪಣಿಯನ್ನು ಮತ್ತಾಯ 3:16-17; 5:16; 28:19; ಯೋಹಾನ 3:16; 17:1 ನೋಡಿರಿ. "ಕೃಪೆ", ಕರುಣೆ, ಶಾಂತಿಯು ಕ್ರಿಸ್ತನ ಜೀವಿತವನ್ನು ಮತ್ತು ಸೇವೆಯನ್ನು ಸಾಧ್ಯವಾಗ ಮಾಡಿತು. ಕೃಪೆಯು ದೇವರ ಹೃದಯಲ್ಲಿನ ಬುಗ್ಗೆಯಾಗಿದೆ; ಕರುಣೆಯು ಸುರಿಸಲ್ಪಟ್ಟ ಕೃಪೆಯಾಗಿದೆ; ಶಾಂತಿಯು ಅದರ ಪ್ರತಿಫಲವಾಗಿದೆ. **4**

**1:4** *"ಬಹಳ ಸಂತೋಷ"*– ಒಬ್ಬ ಮನುಷ್ಯನಿಗೆ ಯಾವುದು ಅವನಿಗೆ ಸಂತೋಷಕೊಡುತ್ತದೆಂದು ತಿಳಿದುಕೊಳ್ಳುವಾಗ ಅವನ ಗುಣವನ್ನು ತಿಳಿದುಕೊಳ್ಳಬಹುದು.

*"ಸತ್ಯವಂತರಾಗಿ ನಡೆಯುವುದು"*– ದೇವರ ಸತ್ಯಗಳನ್ನು ನಂಬುವುದು ಮತ್ತು ಅವುಗಳನ್ನು ಕಾರ್ಯರೂಪದಲ್ಲಿ ಅಭ್ಯಾಸಿಸುವುದು. ಯೋಹಾನ 8:31-32 ಹೋಲಿಸಿರಿ.

*"ತಂದೆಯಿಂದ ನಮಗುಂಟಾದ ಆಜ್ಞಾನುಸಾರ"*– ಧರ್ಮೋ 5:33; 10:12; 1 ಅರಸು 2:3; ಯೆಶಾಯ 30:21; ಯೆರೆ 6:16 ಹೋಲಿಸಿರಿ. ಪಶ್ಚಾತ್ತಾಪ ಪಡಬೇಕೆಂಬ ದೇವರ ಅಪ್ಪಣೆ (ಅಪೊ 17:30) ಕೆಟ್ಟದ್ದನ್ನೆಲ್ಲಾ ಬಿಡಬೇಕೆಂದು ಮತ್ತು ಎಲ್ಲಾ ಸುಳ್ಳುಗಳನ್ನು ಮತ್ತು ಮೋಸಗಳನ್ನು ಬಿಟ್ಟು ಸತ್ಯದಲ್ಲಿ ನಡೆಯಲು ಮಾಡಿದ ಅಪ್ಪಣೆಯಾಗಿದೆ. **5**

- **1:5** ಯೋಹಾನ 13:34. **6**

**1:6** ಯೋಹಾನ 14:15,21,23. ದೇವರು ಏನು ಮಾಡಬೇಕೆಂದು ಹೇಳುತ್ತಾನೋ ಅದನ್ನು ನಾವು ಮಾಡದಿದ್ದರೆ ನಾವು ದೇವರನ್ನು ಪ್ರೀತಿಸುತ್ತೇವೆ ಎಂದು ಯೋಚಿಸುವುದು ಅಥವಾ ಹೇಳುವುದು ನಿಷ್ಪ್ರಯೋಜಕ ಮತ್ತು ಮೋಸಗೊಳಿಸುವವ ಕೆಲಸವಾಗಿದೆ. **7**

**1:7** *"ಮೋಸಗಾರರು"*– ಮತ್ತಾಯ 24:4,24; ರೋಮಾ 16:18; 2 ಕೊರಿಂಥ 11:13-15. ಅವರು ಪ್ರಧಾನ ಮೋಸಗಾರನಿಂದ ಬಂದವರು (ಪ್ರಕ 12:9).

*"ಮನುಷ್ಯನಾಗಿ"*– ಯೋಹಾನ 1:14. ನಿಜವಾದ ಮನುಷ್ಯನ ಸ್ವಭಾವದೊಂದಿಗೆ ಕ್ರಿಸ್ತನು ಮನುಷ್ಯನಾದನು (ಇಬ್ರಿ 2:14,17). ವಾಸ್ತವವಾಗಿ, ಆತನು ಇನ್ನೂ ಅದನ್ನು ಹೊಂದಿದ್ದಾನೆ, ಈಗ ಮರಣದಿಂದ ಪುನರುತ್ಥಾನ ಹೊಂದಿದ್ದಾನೆ ಮತ್ತು ಮಹಿಮೆಯನ್ನು ಹೊಂದಿದ್ದಾನೆ ಮತ್ತು ಆತನು ಅವುಗಳೊಂದಿಗೆ ತಿರುಗಿ ಬರುತ್ತಾನೆ.

*"ಕ್ರಿಸ್ತವಿರೋಧಿ"*– 1 ಯೋಹಾನ 2:18,22; 4:3 – ಕ್ರಿಸ್ತನ ಸ್ಥಳವನ್ನು ತೆಗೆದುಕೊಳ್ಳಲು ಪ್ರಯತ್ನಿಸುತ್ತಿರುವ ವಿರೋಧಿ. **8**

**1:8** ಸುಳ್ಳು ಬೋಧಕರ ಬೋಧನೆಯನ್ನು ಕೇಳಿಸಿಕೊಂಡು ಅವರ ಪ್ರಭಾವಕ್ಕೆ ಬಿದ್ದರೂ ನಿಜವಾದ ವಿಶ್ವಾಸಿಗಳು ತಮ್ಮ ರಕ್ಷಣೆಯನ್ನು ಕಳೆದುಕೊಳ್ಳುವುದಿಲ್ಲ, ಆದರೆ ಬೇರೆ ಎಲ್ಲವನ್ನು ಕಳೆದುಕೊಳ್ಳಬಹುದು. ಪ್ರಕ 3:11; 2 ತಿಮೊ 2:5; 1 ಕೊರಿಂಥ 9:27.

*"ಪೂರ್ಣಫಲ"*– ಪ್ರಕ 22:12. **9**

**1:9** ಕೆಲವರು ತಮ್ಮನ್ನು ಸುಧಾರಿತ ಚಿಂತಕರೆಂದು ನಂಬುತ್ತಾರೆ ಮತ್ತು ಕ್ರಿಸ್ತನ ಸತ್ಯವನ್ನು ಬಿಟ್ಟುಬಿಡಬಹುದೆಂದು ಅಂದುಕೊಳ್ಳುತ್ತಾರೆ. ಆ ರೀತಿಯ ಜನರು ದೇವರಿಲ್ಲದವರೆಂದು ಮಾತ್ರ ತಮ್ಮನ್ನು ಪ್ರಕಟಿಸಿಕೊಳ್ಳುತ್ತಾರೆ. 1 ಯೋಹಾನ 2:19 ಹೋಲಿಸಿರಿ.

*"ನೆಲೆಗೊಂಡಿರುವವನಿಗೆ"*– ಯೋಹಾನ 8:32; 2 ತಿಮೊ 3:14. ಸತ್ಯದಲ್ಲಿ ಮುಂದುವರಿಯುವವರು ತಾವು ದೇವರಲ್ಲಿದ್ದೇವೆಂದು ಪ್ರಕಟಿಸುತ್ತಾರೆ.

*"ಇಬ್ಬರು"*– ವ.3 – ವಾಸ್ತವವಾಗಿ ಇದು ಒಬ್ಬರಿಗಿಂತಲೂ ಹೆಚ್ಚಿನ ವ್ಯಕ್ತಿಗಳನ್ನು ಸೂಚಿಸುತ್ತದೆ. **10**

**1:10** *"ಯಾವನಾದರು ನಿಮ್ಮ ಬಳಿಗೆ ಬಂದರೆ"*– ಕ್ರಿಸ್ತನು ಬೋಧಿಸಿದ್ದನ್ನು ಹೊರತುಪಡಿಸಿ ಬೇರೆ ಯಾವದನ್ನಾದರೂ ಬೋಧಿಸುವವರ ಬಗ್ಗೆ ಅವನು ಮಾತನಾಡುತ್ತಿದ್ದಾನೆ. ನಾವು ಸುಳ್ಳು ಬೋಧಕರನ್ನು ನಮ್ಮ ಮನೆಯೊಳಗೆ ಆಹ್ವಾನಿಸಬಾರದು ಅಥವಾ ಅವರೊಂದಿಗೆ ಎಲ್ಲಿಯೂ ಯಾವುದೇ ರೀತಿಯ ಅನ್ಯೋನ್ಯತೆಯನ್ನು ಇಟ್ಟುಕೊಳ್ಳಬಾರದು. ನಾವು ಅವರನ್ನು ವಂದಿಸಲೂಬಾರದು (2 ಕೊರಿಂಥ 6:15; ರೋಮಾ 16:17 ಹೋಲಿಸಿರಿ). ನಾವು ಹಾಗೆ ಮಾಡಿದರೆ, ನಾವು ನಮ್ಮನ್ನು ಅಪಾಯಕ್ಕೊಳಪಡಿಸಿಕೊಳ್ಳುತ್ತೇವೆ, ಮತ್ತು ಅವರ ಬೋಧನೆಗಳು ಕೆಟ್ಟದ್ದಲ್ಲವೆಂಬ ಅನಿಸಿಕೆಯನ್ನು ಬೇರೆಯವರಲ್ಲಿ ಮೂಡಿಸುತ್ತದೆ. **11**

**1:11** “*ದುಷ್ಕೃತ್ಯಗಳಲ್ಲಿ*”– ಇದು ನಿಜವಾಗಿಯೂ ಕ್ರಿಸ್ತನ ಬೋಧನೆಗೆ ವಿರುದ್ಧವಾದ ಬೋಧನೆಯಾಗಿದೆ. ವಾಸ್ತವವಾಗಿ, ಇದು ಮನುಷ್ಯರ ಅತ್ಯಂತ ಕೆಟ್ಟ ಕೆಲಸವಾಗಿದೆ. ವಿಶ್ವಾಸಿಗಳು ಇದರಲ್ಲಿ ಭಾಗಿಯಾಗಬಾರದು ಅಥವಾ ಅದಕ್ಕೆ ಯಾವ ರೀತಿಯ ಸಹಾಯವನ್ನೂ ಮಾಡಬಾರದು. **12**

**1:12** “*ಸಂತೋಷ*”– ಇದು ಭವಿಷ್ಯದಲ್ಲಿ ಸತ್ಯದಲ್ಲಿರುವ ನಿಜ ಕ್ರೈಸ್ತರ ಅನ್ಯೋನ್ಯತೆಯಾಗಿದೆ. 1 ಯೋಹಾನ 1:4 ಹೋಲಿಸಿರಿ. **13**

**1:13** ವಾಸ್ತವವಾಗಿ ಅವನ ಸಹೋದರಿಯು ವಿಶ್ವಾಸಿಯಾಗಿದ್ದಳು ಮತ್ತು ಆ ಸಮಯದಲ್ಲಿ ಈ ಸಹೋದರಿಯ ಮಕ್ಕಳು ಯೋಹಾನನು ವಾಸಿಸುತ್ತಿದ್ದ ಅದೇ ಪಟ್ಟಣದಲ್ಲಿ ವಾಸಿಸುತ್ತಿದ್ದರು.